ಇಲಾಖೆಯ ಮಾಹಿತಿ ನನಗೆ ಸಿಕ್ಕಿರತಕ್ಕಂಥಾದ್ದು criminal Law is set into motion. ಅಲ್ಲಿ ಕೆಳಗಡೆ ಕೆಲಸ ಮಾಡುವವರು ಅಪರಾಧಿಗಳನ್ನು ಸರಿಯಾಗಿ ಹಿಡಿಯುತ್ತಿಲ್ಲ ಅದನ್ನು ಸಿಓಡಿ ಗೆ ರೆಫರ್ ಮಾಡಬೇಕೆಂದು ನನಗೆ ಕೆಲವರು ಪ್ರಸ್ತಾಪ ಮಾಡಿದ್ದಾರೆ. ಅದು ಅಗತ್ಯ ಕಂಡರೆ ಸಿಓಡಿಗೆ ರೆಫರ್ ಮಾಡುವುದಕ್ಕೆ ನಾನು ಸಂಬಂಧಪಟ್ಟ ಮಂತ್ರಿಗಳಲ್ಲಿ ಪ್ರಸ್ತಾಪವನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು: ಶೆಟ್ಟರ್‌ರವರೇ ಸ್ವಲ್ಪ ತಡೆಯಿರಿ, ಈಗ ಮಿಕ್ಕ ವಿಷಯಗಳನ್ನು ಎರಡೂವರೆ ಗಂಟೆಗೆ ತೆಗೆದುಕೊಳ್ಳೋಣ. ಈಗ ಮಾನ್ಯ ಮುಖ್ಯಮಂತ್ರಿಗಳು ಒಂದು ಬಿಲ್ ಇಂಟ್ರಡ್ಯೂಸ್ ಮಾಡುತ್ತಾರೆ.

5. ಶಾಸನ ರಚನೆ

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ವಿಧೇಯಕ 2003

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, "2003ನೇ ಸಾಲಿನ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ವಿದೇಯಕವನ್ನು ಸಭೆಯ ಮುಂದೆ ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "2003ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿದೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, "2003ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿದೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅನುಬಂಧ -II

ವಿದೇಯಕವನ್ನು ಮಂಡಿಸಲಾಯಿತು

ಅಧ್ಯಕ್ಷರು: ಇನ್ನು ಮಿಕ್ಕ ವಿಷಯಗಳನ್ನು ಮಧ್ಯಾಹ್ನ 2.30 ಕ್ಕೆ ತೆಗೆದುಕೊಳ್ಳೋಣ. ಈಗ ಸದನ ಮುಂದುವರೆದು ಮತ್ತೆ ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗುತ್ತದೆ.

(ಸದನವು 1.33 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 2.30ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು)

(ಶ್ರೀ ಮನೋಹರ ಹೆಚ್. ತಹಸೀಲ್ದಾರ್ ರವರು) ಅಧ್ಯಕ್ಷ

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

6. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ವಿಷಯ:– ಬೀದರ್ ಜಿಲ್ಲೆಯಲ್ಲಿನ ಕಬ್ಬುಗಾರರ ಸಮಸ್ಯೆ ಬಗ್ಗೆ

+ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ): ಮಾನ್ಯ ಉಪಾಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ರೈತರು ಕಬ್ಬು ಬೆಳೆಯುತ್ತಾರೆ. ಕಳೆದ ವರ್ಷ ಬೀದರ್‌ನಲ್ಲಿ ಕಬ್ಬನ್ನು ಬೇರೆ ರಾಜ್ಯಕ್ಕೆ ತೆಗೆದುಕೊಂಡು ಹೋಗಲಾರದ ಹಾಗೆ ಜಿಲ್ಲಾ ಬಂದಿ ಮಾಡಿದರು. ಆ ಜಿಲ್ಲಾಬಂದಿಯಲ್ಲಿನ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟ ನಂತರ, ಮುಖ್ಯಮಂತ್ರಿಯವರು ಆ ಜಿಲ್ಲಾಬಂದಿಯನ್ನು

ತೆಗೆದರು. ಆದರೆ, ಮತ್ತೆ ಈ ವರ್ಷ ಜಿಲ್ಲಾಡಳಿತದವರು ಜಿಲ್ಲಾ ಬಂದಿಯನ್ನು ಹಾಕಿದ್ದಾರೆ. ಬೀದರ್ ಜಿಲ್ಲೆಯಲ್ಲಿ 18 ರಿಂದ 20 ಲಕ್ಷ ಟನ್ ಕಬ್ಬು ಬೆಳೆಯುತ್ತಾರೆ. ನಮ್ಮಲ್ಲಿ ಈ ವರ್ಷ ಇದ್ದಿದ್ದೇ 2 ಷುಗರ್ ಫ್ಯಾಕ್ಟರಿಗಳು. ಕಳೆದ ವರ್ಷ ಒಂದು ಷುಗರ್ ಫ್ಯಾಕ್ಟರಿ ಇತ್ತು. ಬಿಎಸ್ಎಸ್‌ಗೆ ನಾಲ್ಕೂವರೆ ಲಕ್ಷ ಟನ್ ಕಬ್ಬು ಬೆಳೆಯುತ್ತಾರೆ. ಈ ವರ್ಷ ಎನ್ಎಸ್ಎಸ್‌ಗೆ 3 ಲಕ್ಷ ಎಂದರೆ ಒಟ್ಟು ಏಳೂವರೆ ಲಕ್ಷ ಟನ್ ಕಬ್ಬು ಅರೆಯುವುದಾಗುತ್ತದೆ. ಆದರೆ, ನಮ್ಮಲ್ಲೇನು 17 ರಿಂದ 20 ಲಕ್ಷ ಟನ್ ಕಬ್ಬು ಬೆಳೆಯುತ್ತಾರೆ. ಅದರಲ್ಲಿ ಖಂಡಸಾರಿ ಹೋಗಿ 8 ರಿಂದ 9 ಲಕ್ಷ ಟನ್ ಕಬ್ಬು ಉಳಿಯುತ್ತದೆ. ಅದನ್ನು ನಾವು ಹೊರ ರಾಜ್ಯಕ್ಕೆ ತೆಗೆದುಕೊಂಡು ಹೋಗಲೇ ಬೇಕಾಗುತ್ತದೆ. ಇಲ್ಲಿ, ನಾವು ಬೇರೆ ವ್ಯವಸ್ಥೆ ಮಾಡಬೇಕಾಗುತ್ತದೆ. ಬೀದರ್ ಜಿಲ್ಲೆಯಲ್ಲಿ ಜಿಲ್ಲಾಬಂದಿ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಸಂಬಂಧಪಟ್ಟ ಮಂತ್ರಿಗಳು ಜಿಲ್ಲಾಬಂದಿ ಮಾಡಿದ್ದರಿಂದ, ನಮ್ಮ ಕರ್ನಾಟಕಕ್ಕಾಗಲಿ ಮತ್ತು ಜಿಲ್ಲೆಗಳಾಗಲಿ ಏನೂ ಉಪಯೋಗವಾಗುತ್ತಿಲ್ಲ. ಅದರ ಉಪಯೋಗ ಖಂಡಸಾರಿಗಳಿಗಾಗುತ್ತಿದೆ ಮತ್ತು ಜಿಲ್ಲೆಯಲ್ಲಿದ್ದ ಷುಗರ್ ಫ್ಯಾಕ್ಟರಿಯವರು ರೈತರನ್ನು ಶೋಷಣೆ ಮಾಡುತ್ತಿದ್ದಾರೆ. ಟೈಂ ಪ್ರಕಾರ ಕಬ್ಬು ತೆಗೆದುಕೊಂಡು ಹೋಗುತ್ತಿಲ್ಲ. ಈ ಸಲ ನೀರಿಲ್ಲವೆನ್ನುತ್ತಾರೆ. ಬೀದರ್‌ನಲ್ಲಿ ಕೊಳವೆ ಬಾವಿ ಆಗಲಿ, ಓಪನ್ ವೆಲ್ ಇವೆಲ್ಲಾ ಬತ್ತಿಹೋಗುತ್ತಿವೆ. ಇಂಥ ಸಮಯದಲ್ಲಿ ರೈತರು ಬೆಳೆದ ಕಬ್ಬು ಪೂರ್ಣ ಒಣಗಿ ಹೋಗುತ್ತಿದೆ. ರೈತರು ಬಹಳ ಸಮಸ್ಯೆಯಲ್ಲಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಬೆಳೆಯುವ ಕಬ್ಬು ಏನಿದೆ ಅದನ್ನು ಹೊರಗಡೆ ಅಥವಾ ಬೇರೆ ಕಡೆಗೆ ಸಾಗಿಸಲು ಜಿಲ್ಲಾಬಂದಿ ಮಾಡಿದ್ದರಿಂದ ರೈತರಿಗೆ ಬಹಳ ಸಮಸ್ಯೆಗಳಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಯವರು ಆ ಜಿಲ್ಲಾಬಂದಿಯನ್ನು ತೆಗೆಯುತ್ತಾರೆಂದು ನಾನು ತಮ್ಮವತಿಯಿಂದ ಕಳಕಳಿಯಿಂದ ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಲಾಸ್ಟ್ ಟೈಂ ಸಹ ಇದೇ ಸಮಸ್ಯೆ ಇತ್ತು. ಮುಖ್ಯಮಂತ್ರಿಗಳೇ, ತಮ್ಮ ಕಡೆ ಎಲ್ಲಾ ಶಾಸಕರೂ ನಿಯೋಗ ಬಂದಿದ್ದರು. ನಂತರ, ತಾವು ಆ ಸಮಸ್ಯೆ ಅರಿತು ಆ ನಿರ್ಬಂಧವನ್ನು ತೆಗೆದುಹಾಕಿದ್ದಿರಿ. ಈಗ ಬೀದರ್ ಜಿಲ್ಲೆಯಲ್ಲಿ ಮತ್ತೆ ಸಮಸ್ಯೆಯಾಗುತ್ತಿದೆ. ಮಹಾರಾಷ್ಟ್ರಕ್ಕೆ ಯಾವುದೂ ಕಬ್ಬು ಹೋಗಿಲ್ಲ. ನಿರ್ಬಂಧ ಹಾಕಿದ್ದರಿಂದ ಇವತ್ತು ಬೀದರ್‌ನಲ್ಲಿ ಸಕ್ಕರೆ ಕಾರ್ಖಾನೆಗೇ ಹೋಗಬೇಕು. ರೇಟ್ ಇಲ್ಲ. ಮಹಾರಾಷ್ಟ್ರದಲ್ಲಿ 200,300 ರೂಪಾಯಿ ಜಾಸ್ತಿ ಸಿಗುತ್ತದೆಂದು ಅಲ್ಲಿ ತೆಗೆದುಕೊಂಡು ಹೋಗುತ್ತಾರೆ. ಅಷ್ಟು ಬೆನಿಫಿಟ್ ಮಾಡಿಕೊಳ್ಳುತ್ತಾರೆ. 50,100 ಕಿಲೋಮೀಟರ್ ಬೌಂಡರಿಯಲ್ಲೇ ಎಲ್ಲಾ ಇದೆ. ಹೀಗಾಗಿ, ಅದನ್ನು ತಾವು ಕನ್ಸಿಡರ್ ಮಾಡಿ. ಆ ನಿರ್ಬಂಧವನ್ನು ತೆಗೆದು ಹಾಕಬೇಕೆಂದು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಕಬ್ಬು ಬೆಳೆಗಾರರ ಹಲವಾರು ಸಮಸ್ಯೆಗಳಿವೆ. ಆ ಸಮಸ್ಯೆಗಳ ಪೈಕಿ ನಮ್ಮಲ್ಲಿ ಕ್ರಷಿಂಗ್ ಕೆಪಾಸಿಟಿ ಅಂದರೆ ಅರೆಯುವ ಶಕ್ತಿ ಕೆಲವೊಂದು ಭಾಗದಲ್ಲಿ ಇಲ್ಲ. ಕೆಲವೊಂದು ಭಾಗದಲ್ಲಿ ಹೆಚ್ಚಿಗೆ ಇದೆ. ಬೀದರ್‌ನಲ್ಲಿ ಈಗಾಗಲೇ ಎರಡು ಸಕ್ಕರೆ ಕಾರ್ಖಾನೆಗಳು ಕೆಲಸ ಮಾಡುತ್ತಿವೆ. ಮೂರನೇ ಸಕ್ಕರೆ ಕಾರ್ಖಾನೆಗೆ ಪ್ರಯತ್ನಗಳು ನಡೆಯುತ್ತಿವೆ, ಕಟ್ಟುವಂಥ ಕೆಲಸ ನಡೆಯುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರು ಕಬ್ಬಿನ ಟ್ರಾನ್ಸ್ ಪೋರ್ಟೇಶನ್ ಮೇಲೆ ಏನು ನಿರ್ಬಂಧಗಳನ್ನು

ಹಾಕಿದ್ದಾರೆ, ಅದನ್ನು ತೆಗೆದರೆ ಕಬ್ಬು ಬೆಳಿಗಾರರಿಗೆ ಅನುಕೂಲವಾಗಬಹುದೆಂದು ತಾವೇನು ಸೂಚನೆ ಮಾಡಿದ್ದೀರಿ, ಅದನ್ನು ನಾನು ಸಂಬಂಧಪಟ್ಟ ಮಂತ್ರಿಗಳು ಮತ್ತು ಅಧಿಕಾರಿಗಳ ಜೊತೆಯಲ್ಲಿ ಚರ್ಚಿಸಿ, ನಂತರ ಕಬ್ಬು ಬೆಳಿಗಾರರ ಹಿತದೃಷ್ಟಿಯಿಂದ ಏನು ನಿರ್ಧಾರ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

7. ಹಕ್ಕುಚ್ಯುತಿ ಮಂಡನೆ ಪ್ರಸ್ತಾವ

ವಿಷಯ:–ಶಾಸಕರ, ವಿದೇಶ ಪ್ರವಾಸದ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಷಯ, ಈಗಾಗಲೇ ಶಾಸಕರ ವಿದೇಶ ಪ್ರವೇಶದ ಬಗ್ಗೆ ಹಕ್ಕುಚ್ಯುತಿ ಮಂಡಿಸುತ್ತೇನೆಂದು ಮಾನ್ಯ ಕೆ.ಬಿ.ಮಲ್ಲಿಕಾರ್ಜುನರವರು ವಿಷಯ ಪ್ರಸ್ತಾಪಿಸಿದರು. ಆಗಲೇ ಮಾನ್ಯ ಅಧ್ಯಕ್ಷರು ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ಹಿಯರಿಂಗ್ ಆಗುತ್ತಿದೆ. ಅದಕ್ಕೆ ಇವತ್ತು ಬೇಡ, ನಾಳೆ ತೆಗೆದುಕೊಳ್ಳೋಣವೆಂದರು. ಆಗಲೇ ಆ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಶಾಸಕರ ಬಗ್ಗೆ ಸಾರ್ವಜನಿಕರಲ್ಲಿ ಒಂದು ರೀತಿಯ ಅಗೌರವ ಭಾವನೆ ಬರುತ್ತಿದೆ. ವಿದೇಶ ಪ್ರವಾಸ ಹೋಗಿದ್ದಾರೆಂದು ಹೇಳುವುದು. ಕೆಲವು ಸುಳ್ಳು ಮಾಹಿತಿಗಳನ್ನು ಕೊಟ್ಟು ಹೈಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಪಿಟಿಷನ್ ಫೈಲ್ ಮಾಡುವುದು ಹ್ಯಾಬಿಟ್ ಆಗಿದೆ. ಕೆಲವರಿಗೆ ಚಟವಾಗಿದೆ. ಸರಿಯಾದ ಮಾಹಿತಿ ತೆಗೆದುಕೊಳ್ಳುವುದಿಲ್ಲ. ಅಧಿಕೃತವಾಗಿ ಸರ್ಕಾರವನ್ನು ಕೇಳುವುದಿಲ್ಲ. ಪತ್ರಿಕೆಯಲ್ಲಿ ಬಂದ ಕೆಲವು ವಿಷಯಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಕೇಸ್ ಫೈಲ್ ಮಾಡುವುದು, ಪಿ.ಐ.ಎಲ್.ಫೈಲ್ ಮಾಡುವುದು. ಅದರ ಮೇಲೆ ಹೈಕೋರ್ಟಿನವರು ಇಂಟರಿಂ ಆರ್ಡರ್ ಕೊಟ್ಟರು, ಕೆಲವೊಂದು ಅಬ್ಸರ್ವೇಷನ್ ಮಾಡಿದರು. ಯಾವ ಶಾಸಕರು ವಿದೇಶಕ್ಕೆ ಪ್ರವಾಸ ಹೋಗಿದ್ದಾರೆ ಅವರು ತಮ್ಮ ಸ್ವಂತ ಖರ್ಚಿನಲ್ಲಿ ಹೋಗಿದ್ದಾರೆನ್ನುವುದು ಇಂಟರಿಂ ಆರ್ಡರ್ ಆಯಿತು. ಇವತ್ತು ಹಿಯರಿಂಗ್ ಇತ್ತು. ನನಗೆ ಬಂದ ಮಾಹಿತಿ ಪ್ರಕಾರ ಪಿ.ಐ.ಎಲ್. ವಿಥ್ ಕಾಸ್ಟ್ಸ್ ಡಿಸ್‌ಮಿಸ್ ಆಗಿದೆ. 5 ಸಾವಿರ ರೂಪಾಯಿ ದಂಡ ಹಾಕಿದ್ದಾರೆ. ಹೀಗಾಗಿ, ಯಾರು ಈ ರೀತಿಯಾದ ಪಿ.ಐ.ಎಲ್.ಅನ್ನು ವಿಥೌಟ್ ಮಾಹಿತಿ ಫೈಲ್ ಮಾಡುತ್ತಾರೆ ಅದರ ಬಗ್ಗೆ ಇವತ್ತು ಮಲ್ಲಿಕಾರ್ಜುನವರರು ರೈಜ್ ಮಾಡಿದರು, ಅದಕ್ಕೆ ಹೈಕೋರ್ಟಿನ ಸಹಮತ ಸಿಕ್ಕಿದೆ. ಶಾಸಕರ ಬಗ್ಗೆ ಈ ರೀತಿ ತಪ್ಪು ಭಾವನೆಗಳು ನಮ್ಮ ಜನಸಾಮಾನ್ಯರಿಗೆ ಹೋಗಬಾರದು. ಆ ಬಗ್ಗೆ ಈಗಾಗಲೇ ಅವರು ಪ್ರಿವಿಲೆಜ್ ಮೋಷನ್ ಸೂಚನೆ ಕೊಟ್ಟಿದ್ದಾರೆ. ಅದನ್ನು ತಾವು ಪರಿಶೀಲಿಸಬೇಕಾಗುತ್ತದೆ. ಶ್ರೀ ಚಂದ್ರೇಗೌಡರು ಇದರ ಬಗ್ಗೆ ಗಮನಹರಿಸಿ ಹಕ್ಕುಚ್ಯುತಿ ಬಗ್ಗೆ ಗಂಭೀರವಾಗಿ ತೆಗೆದುಕೊಂಡು ಮುಂದೆ ಈ ರೀತಿಯಾದ ರಿಪಿಟಿಷನ್ ಆಗಬಾರದ ಹಾಗೆ ಮಾಡಬೇಕು. ಸುಮ್ಮನೆ ಸಾರ್ವಜನಿಕ ಹಿತಾಸಕ್ತಿ ಪಿಟಿಷನ್ ಫೈಲ್ ಮಾಡುವುದು. ಅನ್‌ನೆಸಿಸರಿಯಾಗಿ ಒಬ್ಬರನ್ನು ಬ್ಲೇಮ್ ಮಾಡುವುದು ಬರಬಾರದು. ದಯವಿಟ್ಟು ಇದರ ಬಗ್ಗೆ ಸರ್ಕಾರದವರು ಗಮನ ಹರಿಸಬೇಕು, ಮಾನ್ಯ ಉಪಾಧ್ಯಕ್ಷರು ಈ ಪಿಟಿಷನ್ ಬಗ್ಗೆ ದಯವಿಟ್ಟು ಗಮನಕ್ಕೆ ತೆಗೆದು ಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ(ಹೊಸಕೋಟೆ): ನಾನು ಸಾರ್ವಜನಿಕ ಉದ್ದಿಮೆ ಸಮಿತಿಯದಲ್ಲಿ ಸದಸ್ಯನಾಗಿದ್ದೇನೆ. ನಾನು, ಎ.ಬಿ. ಪಾಟೀಲ್ ಮತ್ತು ಎಂ.ಪಿ.ಪ್ರಕಾಶ್‌ರವರು